enquiry is conducted ?

ಶ್ರೀ ಎಸ್. ಬಂಗಾರಪ್ಪ.—ಒಂದು ಅಭಿಪ್ರಾಯ ಒಪ್ಪುತ್ತೇನೆ. ಫೋರ್ಸ್ ಮಾಡಿದಾಕ್ಷಣ ಒಬ್ಬ ಆಫೀಸರ್‌ರವರನ್ನು ಸಸ್‌ಪೆಂಡ್ ಮಾಡಬೇಕು ಎಂಬ ಕಾನೂನು ಆಳವಡಿಸಬೇಕೆಂದು ಯಾರು ಹೇಳುವುದಿಲ್ಲ. ಕೆಲವು ಕೇಸುಗಳಲ್ಲಿ ಈ ಸದನದಲ್ಲಿ ಚರ್ಚೆ ಮಾಡಿದ್ದೇವೆ. ಆ ರೀತಿ ಅಮಾನತ್ತು ಇಡತಕ್ಕದ್ದು ಕೆಲವೊಮ್ಮೆ ನಡೆದಿದೆ. ಏಕೆಂದರೆ ಅಲ್ಲಿರತಕ್ಕ ಹಿನ್ನೆಲೆ ನೋಡಿದರೆ, ಸರ್ಕಾರದವರಿಗೆ ಕೆಲವು ವಿಚಾರಗಳು ವರದಿ ಪ್ರಕಾರ ಗೊತ್ತಿರುತ್ತದೆ. ಈ ತರಹದ ವಿಚಾರಗಳನ್ನು ವಿರೋಧಪಕ್ಷದ ನಾಯಕರು ತರಬಹುದು, ಇಲ್ಲ ಆ ಕ್ಷೇತ್ರದ ಸದಸ್ಯರು ತರಬಹುದು. ಇದು ನಿಜವಾಗಿ ವಿಚಾರ ಮಾಡಬೇಕಾದಂಥ ಪ್ರಶ್ನೆ. ಹಿಂದೆ ನಾವು ಇಂಥ ಸಂದರ್ಭಗಳು ಬಂದಾಗ ಕೂಡಲೇ ಕ್ರಮ ತೆಗೆದು ಕೊಂಡಿದ್ದೇವೆಂದು ಮಂತ್ರಿಯಾಗಿ ಉತ್ತರ ಕೊಟ್ಟಿದ್ದೇವೆ. ಅದರ ಬಗ್ಗೆ ತಾವು ವರದಿಯನ್ನು ತೆಗೆದು ನೋಡಿದರೆ ಗೊತ್ತಾಗುತ್ತದೆ. ಈಗ ಇಲ್ಲಿಯ ಪ್ರಶ್ನೆಯೇ ಬೇರೆ. ಒಬ್ಬ ವ್ಯಕ್ತಿ ಸತ್ತಾಗ ಎವಡೆನ್ಸ್ ಅನ್ನು ಸಪ್ರೆಸ್ ಮಾಡುವ ಆಪಾದನೆ ಇದೆ. ವಿರೋಧಪಕ್ಷದ ನಾಯಕರು ಪೋಲೀಸ್ ಜೀಪ್ ಉಪಯೋಗ ಮಾಡುತ್ತಿದ್ದಾರೆಂದು ಹೇಳಿದ್ದಾರೆ. Government has not replied.

ಅದಕ್ಕೆ ಸರ್ಕಾರದಿಂದ ಉತ್ತರ ಬಂದಿಲ್ಲ.

Sri M. Veerappa Moily.—He has used the vehicle.

ಅದನ್ನು ಉಪಯೋಗ ಮಾಡಿದ್ದಾನೆ. ವಕೀಲರನ್ನು ತೆಗೆದುಕೊಂಡು ಹೋಗಲಿಕ್ಕೆ ಉಪಯೋಗ ಮಾಡಿದ್ದಾನೆ. I am making a specific charge.

Mr. Speaker.--I don't want to go into the merits of the case. I am confining myself to rule 334. Under Rule 334 you have brought it to the notice of the House. Actually it is to the House and the concerned minister has taken notice of it and he has said something of it. It may not be to the satisfaction of the hon. member who has raised it.

Sri S. Bangarappa.--I quite agree with that. ನಾವು ಎತ್ತಿದ ತಕ್ಷಣ ಪ್ರತಿಯೊಂದು ನಮ್ಮ ಪರವಾಗಿಯೇ ಬರಬೇಕೆಂದು ಅಲ್ಲ. ಇವತ್ತು ಮಾನ್ಯ ವಿರೋಧಪಕ್ಷದ ನಾಯಕರ ಕಳಕಳಿ ಏನು ಎಂಬುದನ್ನು ತಾವು ಅರ್ಥಮಾಡಿಕೊಳ್ಳಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೆ, ನನ್ನದೊಂದು ಕ್ರಿಯಾಲೋಪ. ವಿರುದ್ಧ ಪಕ್ಷದ ನಾಯಕರು ಸ್ಪಷ್ಟವಾಗಿ ಹೇಳಿದ್ದಾರೆ, ತಾವು ಸಲಹೆ ಕೊಟ್ಟಿದ್ದೀರಿ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸುವುದನ್ನು ಬಿಟ್ಟು ಮತ್ತೆ ಮತ್ತೆ ಅದೇ ಅರ್ಥ ಬರುವಂತೆ ಹೇಳಿದ್ದನ್ನೇ ಹೇಳಿಕೊಂಡು ವಿಷಯವನ್ನು ಅನವಶ್ಯಕವಾಗಿ ಲಂಬಿಸಿಕೊಂಡು ಹೋಗುವುದು ಸರಿಯಲ್ಲ. ಈ ವಿಷಯವನ್ನು ಇಲ್ಲಿಗೆ ಮುಕ್ತಾಯಮಾಡಬೇಕೆಂದು ಹೇಳಬಯಸುತ್ತೇನೆ. ರೂಲ್ 334ರ ಪ್ರಕಾರ ತಾವು ತೀರ್ಮಾನವನ್ನು ಕೊಟ್ಟಿದ್ದೀರಿ. ಮಾನ್ಯ ಮಂತ್ರಿಗಳು ಏನು ಹೇಳಬೇಕೋ ಅದನ್ನು ಹೇಳಿದ್ದಾರೆ, ಆದ್ದರಿಂದ ಈ ವಿಷಯವನ್ನು ಇಲ್ಲಿಗೆ ನಿಲ್ಲಿಸಿ ಸದನದ ಇತರೆ ಕಾರ್ಯಕ್ರಮಗಳನ್ನು ತೆಗೆದು ಕೊಳ್ಳುತ್ತೇನೆ.

ಅಧ್ಯಕ್ಷರು.--ನಾನೂ ಅದನ್ನೇ ಹೇಳುತ್ತಿದ್ದೇನೆ. ಮಾನ್ಯ ಸದಸ್ಯರು ಬೇರೆ ವಿಷಯದಲ್ಲಿ ಏನಾದರೂ ಹೇಳುವುದಾದರೆ ಹೇಳಲಿ. ಆದರೆ ಇದಕ್ಕೆ ಸಂಬಂಧಪಟ್ಟಂತೆ ಬೇಡ.

ಶ್ರೀ ಎಸ್. ಬಂಗಾರಪ್ಪ.--ಈ ಆಫೀಸರನ್ನು ಏತಕ್ಕೆ ವರ್ಗಮಾಡಿದರು ಎಂಬುದನ್ನು ಹೇಳಬಹುದು. ಅವರನ್ನು ಸಸ್ಪೆಂಡ್ ಮಾಡುವುದಕ್ಕೆ ಇರುವ ಕಾರಣಗಳು ಏನು ಎಂಬುದನ್ನು ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಶಾಸಕರು ಹೇಳಿದ್ದಾರೆ. ಇದಕ್ಕೆ ಸರ್ಕಾರ ಸೂಕ್ತ ಉತ್ತರವನ್ನು ಕೊಟ್ಟರೆ ಅನುಕೂಲವಾಗುತ್ತದೆ.

ಅಧ್ಯಕ್ಷರು.—ಅವರು ಅದಕ್ಕೆ ತಯಾರಿಲ್ಲವಲ್ಲ. ಅವರು ಉತ್ತರ ಕೊಡುತ್ತಿಲ್ಲ . . .

(ಗೊಂದಲ)

334ನೇ ನಿಯಮಾವಳಿ

ವಿಷಯ :—ಧಾರವಾಡ ಜಿಲ್ಲೆಯ ಚಿಕ್ಕಸೆರಗುಂದ ತಾಲ್ಲೂಕಿನಲ್ಲಿ ಕಾಲರದ ಬಗ್ಗೆ

ಅಧ್ಯಕ್ಷರು.—ಈಗ 335ನೇ ನಿಯಮಾವಳಿಯನ್ನು ತೆಗೆದುಕೊಳ್ಳೋಣ.

ಶ್ರೀ ಪಿ.ಜಿ.ಆರ್.ಸಿಂಧ್ಯ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ

ಧಾರವಾಡಜಿಲ್ಲೆಯ ಚಿಕ್ಕ ನರಗುಂದ ಗ್ರಾಮದಲ್ಲಿ ಕಾಲರಾ ರೋಗವು ಹರಡಿದೆ. ಈ ಗ್ರಾಮದ ಜನ ಸಂಖ್ಯೆ 2500. 23 ಜನರಿಗೆ ಈ ಖಾಯೀಲೆ ತಗುಲಿದ್ದು ಒಂದು ಮರಣ ವರದಿಯಾಗಿದೆ, ಮೊದಲನೆಯ ಕೇಸು 13-8-83ರಲ್ಲಿ ಮತ್ತು ಕಡೆಯ ಕೇಸು 18-8-83ರಲ್ಲಿ ಸಂಭವಿಸಿರುತ್ತದೆ, ಮರಣವು 14-8-83ರಲ್ಲಿ ವರದಿಯಾಗಿದೆ. 15-8-83ರಿಂದ ಈಚೆಗೆ ರೋಗ ಪುನಃ ವರದಿಯಾಗಿಲ್ಲ. ಧಾರವಾಡ ಜಿಲ್ಲಾ ಆರೋಗ್ಯಧಿಕಾರಿಗಳು ಕೂಡಲೇ ಗ್ರಾಮಕ್ಕೆ ಭೇಟಿಕೊಟ್ಟು ಎಲ್ಲಾ ಮುಂಜಾಗರೂಕತಾ ಕ್ರಮಗಳನ್ನು ತೆಗೆದುಕೊಂಡಿರುವುದನ್ನು ಪರಿಶೀಲಿಸಿರುವುದಲ್ಲದೆ ಆದೇಶಗಳನ್ನು ನೀಡಿರುತ್ತಾರೆ.

ಈ ಕೆಳಗೆ ನಮೂದಿಸಿರುವ ರೋಗ ನಿರೋಧಕ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಅ) ಈ ವರೆವಿಗೆ 1500 ಮಂದಿಗೆ ಕಾಲರಾ ಚುಚ್ಚುಮದ್ದು ನೀಡಲಾಗಿದೆ.

ಆ) ಗ್ರಾಮದಲ್ಲಿರುವ ನೀರಿನ ಕೊಳ, ಬಾವಿಗಳಿಗೆ ಬ್ಲೀಚಿಂಗ್ ಪುಡಿ ಹಾಕಿ ಶುದ್ಧಿ ಪಡಿಸಲಾಗಿದೆ.

ಇ) 5 ಮನೆಗಳಿಗೆ ಕ್ರಿಮಿನಾಶಕವನ್ನು ಸಿಂಪಡಿಸಲಾಗಿದೆ.

ಈ) ರೋಗಿಗಳಿಗೆ ಚಿಕಿತ್ಸೆ ನೀಡಲು ಬೇಕಾದ ಔಷಧಗಳನ್ನು ಪೂರೈಸಲಾಗಿದೆ.

ಉ) ಉಪಹಾರಗೃಹ, ಸಂತೆ ಇವುಗಳನ್ನು ಮುಚ್ಚಲಾಗಿದೆ.

ಊ) ಊರಿನ ಎಲ್ಲಾ ಜನರಿಗೂ ಕಾಲರಾ ರೋಗದ ಬಗ್ಗೆ ಸೂಕ್ತ ಶಿಕ್ಷಣ ನೀಡಲಾಗಿದೆ. ಹಾಗೂ ಕುದಿಸಿ ಆರಿಸಿದ ನೀರನ್ನು ಕುಡಿಯುವಂತೆ ಸೂಚನೆ ನೀಡಲಾಗಿದೆ.

ಚಿಕ್ಕ ನರಗುಂದ ಮತ್ತು ನರಗುಂದ ಗ್ರಾಮಗಳಲ್ಲಿ ಇಬ್ಬರು ಆರೋಗ್ಯ ಕಾರ್ಯಕರ್ತರು, ಒಬ್ಬ ಆರೋಗ್ಯ ನಿರೀಕ್ಷಕರು ಸದಾಕಾಲ ಹಾಜರಿದ್ದು ಎಲ್ಲಾ ವಿಧವಾದ ಮುಂಜಾಗರೂಕತಾ ಕಾರ್ಯಕ್ರಮಗಳನ್ನು ತೆಗೆದುಕೊಂಡಿರುತ್ತಾರೆ. ಚಿಕ್ಕನರಗುಂದ ಗ್ರಾಮ ಬಿಟ್ಟು ಬೇರೆ ಯಾವ ಗ್ರಾಮಗಳಿಂದಲೂ ಈ ಖಾಯಿಲೆ ವರದಿಯಾಗಿಲ್ಲ.

ಈಚೆಗೆ ಸಂಭವಿಸಿದ ಪ್ರವಾಡದ ಪರಿಣಾಮವಾಗಿ ಆಲ್ಲಲ್ಲಿ ನಿಂತ ನೀರು ಕುಡಿಯುವ ನೀರಿನ ಆಸರೆಗಳಿಗೆ ಸೇರಿ ಈ ಸಾಂಕ್ರಾಮಿಕ ರೋಗ ಹರಡಿರಬಹುದೆಂದು ಭಾವಿಸಲಾಗಿದೆ.

ಧಾರವಾಡ ಜಿಲ್ಲೆಯಲ್ಲಿ ವರದಿರುವ ಕಾಲರಾ ರೋಗದ ಪ್ರಕರಣಗಳು ಕೆಳಿಗೆ ಕೊಡಲಾಗಿದೆ,

ತಾರೀಖು : 1-1-83ರಿಂದ 20-8-83ರವರೆವಿಗೆ.

ರೋಗ ತಗುಲಿದ್ದು 78

ಮರಣಗಳು 12

ಶ್ರೀ ಬಾಪುಗೌಡ .— ಮಾನ್ಯ ಅಧ್ಯಕ್ಷರೇ ನಾನು ಕೂಡ ಈ ಪ್ರದೇಶದಿಂದಲೇ ಬಂದಿರುವ ವನಿದ್ದೇನೆ. ಈ ಪ್ರದೇಶದಲ್ಲಿ ಬರುವಂಥ ಕುಡಿಯುವ ನೀರಿಗೆ ಬ್ಲೀಚಿಂಗ್ ಪೌಡರನ್ನು ಹಾಕುತ್ತಾರೆ. ಕೆಳಿಗೆ ನೀರು ಹೋಗುವಂಥ ಕಡೆಯೂ ಈ ಖಾಯಿಲೆ ಹಬ್ಬುವ ಸಂಭವ ಇರುವುದರಿಂದ, ಮತ್ತು ಆ ಪ್ರದೇಶಗಳಲ್ಲಿ ಇರುವಂಥ ಆರೋಗ್ಯ ಖಾತೆಯ ಸಬ್ಬಂಧಿಗಳಾದೆ ಇರುವುದರಿಂದ, ಇನ್ನೂ ಅನೇಕ ಸ್ಥಾನಗಳು ಖಾಲಿ ಇರುವುದರಿಂದ ತೀವ್ರವಾಗಿ ಖಾಲಿ ಬಿದ್ದಿರುವ ಸ್ಥಾನಗಳನ್ನು ಕೂಡಲೇ ತುಂಬ ಬೇಕೆಂದು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ.—ವ್ಯವಸ್ಥೆ ಮಾಡುತ್ತೇನೆ.

ಗಮನ ಸೆಳೆಯುವ ಸೂಚನೆಗಳು

ವಿಷಯ. ತೀರ್ಥಹಳ್ಳಿ ತೋಟಗಾರಿಕೆ ಇಲಾಖೆಯಲ್ಲಿ 70 ಜನ ಕೂಲಿಗಾರರಿಗೆ ದಿನ ಕೂಲಿಯನ್ನು ಕೊಡದಿರುವ ಬಗ್ಗೆ

ಶ್ರೀ ಬಿ. ಎಸ್. ಯಡಿಯಾರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೆ ತೀರ್ಥಹಳ್ಳಿ ತೋಟಗಾರಿಕಾ ಇಲಾಖೆಯಲ್ಲಿ 70 ಜನ ಕೂಲಿಗಾರರಿಗೆ ದಿನಗೂಲಿಯನ್ನು ಕೊಡದಿರುವ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್(ಮಾನ್ಯ ಪಶುಸಂಗೋಪನೆ ಮತ್ತು ತೋಟಗಾರಿಕಾ ಸಚಿವರು).—

ಮಾನ್ಯ ಅಧ್ಯಕ್ಷರೇ, 1983-84ನೇ ವರ್ಷಕ್ಕೆ ಮಂಜೂರಾದ ಆಯೆವ್ಯಯಕ್ಕೆ ಅನುಗುಣವಾಗಿ ತೋಟಗಾರಿಕಾ ನಿರ್ದೇಶನಾಲಯವು ರೂ. 60,700ನ್ನು ತೀರ್ಥಹಳ್ಳಿಯ ತೋಟಗಾರಿಕಾ ಕ್ಷೇತ್ರಕ್ಕೆ ನೀಡಿರುತ್ತದೆ. ಈ ಮೊತ್ತವು ತೋಟಗಾರಿಕಾ ಕ್ಷೇತ್ರದ ಆರು ತಿಂಗಳ ಅವಧಿಯ ಅಂದರೆ ದಿನಾಂಕ ಏಪ್ರಿಲ್ 1 ರಿಂದ ಸೆಪ್ಟೆಂಬರ್ 30ರವರೆಗೆ ಪೂರ್ತಿ ಕಾರ್ಯನಿರ್ವಹಣೆಗೆ ಸಂಬಂಧಿಸಿದ್ದು, ಅದರಲ್ಲಿ ದಿನಗೂಲಿ ಕೆಲಸಗಾರರ ಕೂಲಿ ಪಾವತಿಯನ್ನೂ ಒಳಗೊಂಡಿದೆ. ಮೇಲ್ಕಂಡ ರೀತಿಯಲ್ಲಿ ಶಿವಮೊಗ್ಗ ಜಿಲ್ಲೆಯ ಇತರ ತೋಟಗಾರಿಕಾ ಕ್ಷೇತ್ರಗಳಿಗೂ ಅವಶ್ಯಕವಾದ ಬಿಡುಗಡೆಚ್ಚವನ್ನು ಸೆಪ್ಟೆಂಬರ್ ತಿಂಗಳ ಅಂತ್ಯದವರೆಗೆ ನೀಡಿದ್ದಾಗಿದೆ.

ಸಂದರ್ಭ ಹೀಗಿದ್ದರೂ, ತೀರ್ಥಹಳ್ಳಿ ತೋಟಗಾರಿಕಾ ಕ್ಷೇತ್ರದ ದಿನಗೂಲಿ ಕೆಲಸಗಾರರಿಗೆ ಯಾವ ಕಾರಣದಿಂದ 4 ತಿಂಗಳ ದಿನಗೂಲಿಯನ್ನು ಬಟವಾಡೆ ಮಾಡದಿರುವ ಪ್ರಮೇಯವೇನೆಂಬುದನ್ನು ಸಂಬಂಧಪಟ್ಟ ಕ್ಷೇತ್ರ ಹಾಗೂ ಶಿವಮೊಗ್ಗ ಜಿಲ್ಲೆಯ ಇತರ ತೋಟಗಾರಿಕಾ ಕ್ಷೇತ್ರಾಧಿಕಾರಿಗಳಿಂದ